ಸರ್ಕಾರ
ಕಂದಾಯ ಇಲಾಖೆ

ನಂ.ಎಎಲ್‌ಎನ್ : (ಎಂಜಿ)ಸಿಆರ್ 09 &10 /06.07

ಜಿಲ್ಲಾಧಿಕಾರಿಗಳ ಕಛೇರಿ,
ತುಮಕೂರು ಜಿಲ್ಲೆ,
ತುಮಕೂರು, ದಿನಾಂಕ 16-03-2007

## ಅನುಬಂಧ- 10

# ಅಧಿಕೃತ ಜ್ಞಾಪನ

ವಿಷಯ : ತುಮಕೂರು ಜಿಲ್ಲೆ ಶಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಶೀಬಿ ಅಗ್ರಹಾರ ಗ್ರಾಮದ ಸ.ನಂ 34/1 ರಲ್ಲಿ 10-09 ಎಕರೆ/ಗುಂಟೆ,

ಸ.ನಂ.41/2 ರಲ್ಲಿ 17-24 ಎಕರೆ/ಗುಂಟೆ
ಸ.ನಂ. 271 ರಲ್ಲಿ 04-00
ಸ.ನಂ. 272 ರಲ್ಲಿ 04-00
ಸ.ನಂ 273 ರಲ್ಲಿ 04-00
39-33 ಎಕರೆ/ಗುಂಟೆ
ಖರಾಬು 00-07 ಗುಂಟೆ
ಒಟ್ಟು 40-00 ಎಕರೆ/ಗುಂಟೆ

ವಿಸ್ತೀರ್ಣವನ್ನು ಶ್ರೀ.ರಾಜೀವ್‌ರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ, ಬೆಂಗಳೂರು ರವರು ಮತ್ತು ಇದೇ ಶೀಬಿ ಅಗ್ರಹಾರ ಗ್ರಾಮದ

ಸ.ನಂ 34/2 ರಲ್ಲಿ 08-14 ಎಕರೆ/ಗುಂಟೆ,
ಸ.ನಂ.35 ರಲ್ಲಿ 29-13 ಎಕರೆ/ಗುಂಟೆ
37-27 ಎಕರೆ/ಗುಂಟೆ
ಖರಾಬು 00-03 ಗುಂಟೆ
ಒಟ್ಟು 37-30 ಎಕರೆ/ಗುಂಟೆ

ವಿಸ್ತೀರ್ಣವನ್ನು ಶ್ರೀಮತಿ. ವೈ. ಮಂಜುಳಾ ರೆಡ್ಡಿ ಕೋಂ ರಾಜೀವ್ ರೆಡ್ಡಿ, ಬೆಂಗಳೂರುರವರು ವ್ಯವಸಾಯೇತರ ವಾಣಿಜ್ಯ (ರೆಸಾರ್ಟ್) ಭೂಪರಿವರ್ತನೆ ಮಂಜೂರು ಮಾಡಲು ಕೋರಿ ಸಲ್ಲಿಸಿರುವ ಅರ್ಜಿ ದಿನಾಂಕ 06.02.2006.

ಉಲ್ಲೇಖ : 1. ತಹಸೀಲ್ದಾರ್ ಶಿರಾ ತಾಲೂಕು ರವರ ವರದಿ ಸಂಖ್ಯೆ ALN.CR 49 ಮತ್ತು 50/05-06 ದಿ : 16-05-06 ಮತ್ತು 26-07-06.

2.ಭೂಪರಿವರ್ತನಾ ಶುಲ್ಕ ಕ್ರಮವಾಗಿ ರೂ. 871200-00 ಮತ್ತು 8,22,195-00 , ಮಾರುಕಟ್ಟೆ ದರ ( 0-07 ಗುಂಟೆ ಖರಾಬಿಗೆ )ರೂ. 5775-00 ಮತ್ತು 2475-00 ಹಾಗೂ ಪೋಡಿ ಶುಲ್ಕ ರೂ. 275-00 ಮತ್ತು 110-00 ಒಟ್ಟು ರೂ. 877250-00+ 824780 =

ಮೊಬಲಗನ್ನು ಕ್ರಮವಾಗಿ ಡಿ.ಡಿ/ಚಲನ್‌ನಂ. 10 ದಿ : 18-09-2006 ಮತ್ತು 11/ದಿನಾಂಕ 18.09.2006 ರಂದು ಖಜಾನೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

3. ಏಕಗವಾಕ್ಷಿ ಸಮಿತಿಯ ನಡವಳಿಕೆಗಳ ಸಂಖ್ಯೆ .... ... ... ... ದಿನಾಂಕ 08.09.2006.

4. ಈ ಕಛೇರಿಯ ಇದೇ ಸಮಸಂಖ್ಯೆಯ ಅಧಿಕೃತ ಜ್ಞಾಪನದ ದಿನಾಂಕ 30.09.2006 ರ ತಾತ್ಕಾಲಿಕ ಆದೇಶ.

5.ನಗರ ಯೋಜನಾ ನಿರ್ದೇಶಕರು, ಬೆಂಗಳೂರು ಇವರು ಹೊರಡಿಸಿದ ಆದೇಶದ ಸಂಖ್ಯೆ ನಯೋ/21ಉನಿ/( ಕೇಂ.ಕಾ) ವಿನ್ಯಾಸ 2193/ 2006.07 ದಿನಾಂಕ 12.03.2007.

- : :() : : -

ಶ್ರೀ.ರಾಜೀವರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ ಬೆಂಗಳೂರು ಇವರು ಶಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಶೀಬಿಅಗ್ರಹಾರ ಗ್ರಾಮದ 34/1, 41/2, 271, 272, 273 ಸರ್ವೆ ನಂ.ರ ಒಟ್ಟು ವಿಸ್ತೀರ್ಣ 40-00 ಎಕರೆ/

ಮತ್ತು ಶ್ರೀಮತಿ. ವೈ. ಮಂಜುಳಾ ರೆಡ್ಡಿ ಕೋಂ ರಾಜೀವರೆಡ್ಡಿ ಬೆಂಗಳೂರು ಇವರು ಶಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಶೀಬಿಅಗ್ರಹಾರ ಗ್ರಾಮದ 34/2 ಮತ್ತು 35 ಸರ್ವೆ ನಂ.ರ ಒಟ್ಟು ವಿಸ್ತೀರ್ಣದ ಪೈಕಿ 37-27 ಎಕರೆ/ಗುಂಟೆ ವಿಸ್ತೀರ್ಣ ಒಟ್ಟು 77-30 ಎಕರೆ/ ಗುಂಟೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ( ರೆಸಾರ್ಟ್) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ 06-02-2006 ದಿನಾಂಕದಂದು ಅರ್ಜಿ ಸಲ್ಲಿಸಿರುವರು. ಸದರಿ ಅರ್ಜಿದಾರರು ಅಗತ್ಯ 10-00 ರೂ. ಶುಲ್ಕವನ್ನು ಸಂದಾಯ ಚಲನ್ ನಂ. - ದಿನಾಂಕ - ರನ್ವಯ ಮಾಡಿರುವರು.

ಸದರಿಯವರ ಕೋರಿಕೆಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95 ರ ಮತ್ತು ಆದರಡಿ ಉಪಬಂಧಗಳನ್ನು ಓದಲಾದ ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ / ಕಾರ್ಪೋರೇಷನ್ ಕಾಯ್ದೆ / ಪಂಚಾಯತಿ ಕಾಯ್ದೆಯಲ್ಲಿನ ಹಾಗೂ ಕರ್ನಾಟಕ ಕಂಟ್ರಿ ಟೌನ್ ಪ್ಲಾನಿಂಗ್ ಕಾಯ್ದೆಯಲ್ಲಿನ ಅವಕಾಶಗಳನ್ನು ಅನುಸರಿಸಿ ಪರಿಶೀಲಿಸಲಾಗಿದೆ. ಅರ್ಜಿದಾರರು ಲಭ್ಯಪಡಿಸಿದ ಅಗತ್ಯ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ ಸಂಬಂಧಿತ ಕಾಯ್ದೆ ನಿಯಮಗಳಲ್ಲಿನ ಎಲ್ಲ ಸಂಬಂಧಿತ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಏಕಗವಾಕ್ಷಿ ಸಮಿತಿಯವರು ಮೇಲ್ಕಂಡ ಕಾಯ್ದೆ ಮತ್ತು ನಿಯಮಗಳಲ್ಲಿನ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮನದಟ್ಟು ಮಾಡಿಕೊಂಡಿರುವರು.

ಅರ್ಜಿದಾರರು ಉಲ್ಲೇಖ (5)ರಲ್ಲಿನ ನಗರ ಯೋಜನಾ ನಿರ್ದೇಶಕರು, ಬೆಂಗಳೂರು ಇವರು ಹೊರಡಿಸಿದ ಆದೇಶ ದಿನಾಂಕ 12.03.2007 ರ ಪ್ರಕಾರ ಅನುಮೋದಿತ ಬಡಾವಣೆ ಯೋಜನೆ ಮತ್ತು ನಕ್ಷೆಯನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ ಉಲ್ಲೇಖ (4)ರಲ್ಲಿ ಈ ಕಛೇರಿಯಿಂದ ಹೊರಡಿಸಿದ್ದ ತಾತ್ಕಾಲಿಕ ಆದೇಶವನ್ನು ರದ್ದುಪಡಿಸಿರುತ್ತದೆ.

ಏಕಗವಾಕ್ಷಿ ಸಮಿತಿಯು ಅರ್ಜಿದಾರರು ಅಗತ್ಯ ಕ್ರಮ ಕೈಗೊಂಡಿರುವ ಬಗ್ಗೆ ತೃಪ್ತಿ ಹೊಂದಿದ್ದು, ಶ್ರೀ.ರಾಜೀವ್ ರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ, ಬೆಂಗಳೂರು ಇವರಿಗೆ ಶಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಶೀಬಿಅಗ್ರಹಾರ ಗ್ರಾಮದ 34/1 ರಲ್ಲಿ 10-09, 41/2 ರಲ್ಲಿ 17-24, 271 ರಲ್ಲಿ 04-00, 272 ರಲ್ಲಿ 04-00, 273 ರಲ್ಲಿ 04-00 ಎಕರೆ/ಗುಂಟೆ = 39-33 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಖರಾಬು 0.07 ಗುಂಟೆ ಸೇರಿ ಒಟ್ಟು 40-00 ಎಕರೆ ಮತ್ತು ಶ್ರೀಮತಿ. ವೈ. ಮಂಜುಳಾರೆಡ್ಡಿ ಕೋಂ ರಾಜೀವ್ ರೆಡ್ಡಿ, ಬೆಂಗಳೂರು ಇವರಿಗೆ ಶಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಶೀಬಿಅಗ್ರಹಾರ ಗ್ರಾಮದ 34/2 ಮತ್ತು 35 ಸರ್ವೆ ನಂ. 34/2 ರಲ್ಲಿ 8-14 ಎಕಂ, ಸ.ನಂ. 35 ರಲ್ಲಿ29-13 ಎಕರೆ = 37-27 + 0-03 ಗುಂಟೆ ಖರಾಬು ಸೇರಿ ಒಟ್ಟು 37-30 ಎಕರೆ/ಗುಂಟೆ ಎರಡೂ ಪ್ರಸ್ತಾವನೆ ಸೇರಿ ಒಟ್ಟು 77-30 ಎಕರೆ/ಗುಂಟೆ ವಿಸ್ತೀರ್ಣದ ಜಮೀನಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಾಣಿಜ್ಯ ( ರೆಸಾರ್ಟ್ ) ಉದ್ದೇಶಕ್ಕೆ ಭೂ ಪರಿವರ್ತನೆ ನೀಡಲಾಗಿದೆ.

01. ಭೂ ಪರಿವರ್ತಿತ ಜಮೀನನ್ನು ವಾಣಿಜ್ಯ (ರೆಸಾರ್ಟ್) ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
02. ಈ ಜಮೀನಿನಲ್ಲಿ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವುದು ಮತ್ತು ಸದರಿ ಜಮೀನಿನಲ್ಲಿ ಲೇ ಔಟ್ ಪ್ಲಾನಿಗೆ ಅನುಮೋದನೆ ಪಡೆದಿರುವಂತೆ ನಿಗದಿಪಡಿಸಿದ ಗಾತ್ರದ ನಿವೇಶನ ಗಳನ್ನು ಮಾತ್ರ ಪರಭಾರೆ ಮಾಡತಕ್ಕದ್ದು.
03. ಇತರ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ನಗರ ಯೋಜನಾ ನಿರ್ದೇಕಶರು, ಬೆಂಗಳೂರು (ಪ್ರಾಧಿಕಾರ / ನಗರಪಾಲಿಕೆ / ಇತ್ಯಾದಿ ) ರವರಿಂದ ಅನುಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
04. ಸಾರ್ವಜನಿಕ ಹಿತದ ದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರಿಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಸಾರ್ವಜನಿಕ ಅನುಕೂಲತೆ ಹಾಗೂ ಭದ್ರತೆಗಳ ಉದ್ದೇಶದಿಂದ ಈ ಎಲ್ಲ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿದ ನಂತರವೇ ನಿವೇಶನಗಳ ಹಂಚಿಕೆ / ಪರಭಾರೆ ಮಾಡತಕ್ಕದ್ದು.

05. ಈ ಜಮೀನಿಗೆ ತಾಕು ಫೂಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸರ್ವೆ ನಂ. 34/1 ರಲ್ಲಿನ "ಎ" ಖರಾಬು ವಿಸ್ತೀರ್ಣ.0-07ಗುಂಟೆಗೆ ಮಾರುಕಟ್ಟೆ ದರ ಮತ್ತು ಭೂ ಪರಿವರ್ತನೆ ಶುಲ್ಕ ರೂ. 5775-00 ಪಾವತಿಸಿಕೊಳ್ಳಲಾಗಿದ್ದು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ. ಹಾಗೂ "ಬಿ " ಖರಾಬಿನಲ್ಲಿ ಬರುವ ಸ.ನಂ.34/1 ರಲ್ಲಿ 0-14, ಸ.ನಂ. 41/2 ರಲ್ಲಿ 01-31 ಎಕರೆ/ಗುಂಟೆ ವಿಸ್ತೀರ್ಣ ಮತ್ತು ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸ.ನಂ. 35 ರಲ್ಲಿನ "ಎ" ಖರಾಬು ವಿಸ್ತೀರ್ಣ 0.03 ಗುಂಟೆಗೆ ಮಾರುಕಟ್ಟೆ ದರ ರೂ. 2475-00 ಪಾವತಿಸಿಕೊಳ್ಳಲಾಗಿದ್ದು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ. ಹಾಗೂ "ಬಿ" ಖರಾಬಿನಲ್ಲಿ ಬರುವ ಸ.ನಂ.34/2 ರಲ್ಲಿ 0-11, ಸ.ನಂ. 35 ರಲ್ಲಿ 1-27 ಎಕರೆ/ಗುಂಟೆ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ " ಬಿ" ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಸೀಲ್ದಾರರವರು ಈ ಬಾಬ್ತು ಆರ್.ಟಿ.ಸಿ ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

06. ಲೋಕೋಪಯೋಗಿ ಇಲಾಖೆಯವರು ಶಾಸನಾತ್ಮಕವಾಗಿ ನಿರ್ಧರಿಸಿರುವಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯ ಭಾಗದಿಂದ ನಿಗದಿಪಡಿಸಿದ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯ ಭಾಗದಿಂದ ನಿಗದಿಪಡಿಸಿದ ಅಂತರವನ್ನು ಕಾದಿರಿಸಬೇಕು. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

07. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ ಪರಿಸರ ಇಲಾಖೆಗಳ ಅನುಮತಿ ಪಡೆದಿರುವ ರೀತ್ಯಾ ಅಥವಾ ಷರತ್ತುಗಳನ್ನು ಪೂರೈಸಿದ ನಂತರವೇ ಉಪಯೋಗಿಸಿಕೊಳ್ಳತಕ್ಕದ್ದು.

08. ಸದರಿ ಬಡಾವಣೆಗೆ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿರುವ ರೀತಿಯೇ ನಿರ್ಮಿಸತಕ್ಕದ್ದು.

09. ಬಡಾವಣೆಯೊಳಗೆ ಆಂತರಿಕ ರಸ್ತೆಗಳನ್ನು ಅಗಲಕ್ಕೆ ಅನುಗುಣವಾಗಿ ಏಕಗವಾಕ್ಷಿ ಸಮಿತಿಯಲ್ಲಿ ಪ್ರಾಧಿಕೃತ ಇಲಾಖೆಯವರು ಅನುಮೋದನೆ ನೀಡಿರುವಂತೆ ಮಾತ್ರ ನಿರ್ಮಿಸತಕ್ಕದ್ದು.

10. ಸಾರ್ವಜನಿಕ ಉಪಯೋಗಕ್ಕಾಗಿ ನಿಗದಿಪಡಿಸಲ್ಪಟ್ಟ ಈ ಕೆಳಗಿನ ನಿವೇಶನಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೋಂದಾವಣೆ ಮಾಡಿಸಿಕೊಡತಕ್ಕದ್ದು.

| ನಿವೇಶನಗಳ ಸಂಖ್ಯೆ | ಉದ್ದೇಶ | ಉದ್ದ X ಅಗಲ |
|---|---|---|
| - | ವಾಹನ ನಿಲುಗಡೆ | 15,767.84 ಚ.ಮೀ |
| - | ಉದ್ಯಾನವನ | 31,477.57 ಚ.ಮೀ |
| - | ರಸ್ತೆ | 1,09,767.84 ಚ.ಮೀ |

11. ಬಡಾವಣೆಯ ನಕ್ಷೆಯಲ್ಲಿ ಅನುಮೋದನೆಗೊಂಡ ವಿವಿಧ ಗಾತ್ರದ ಒಟ್ಟು ನಿವೇಶನಗಳು ಈ ಕೆಳಕಂಡಂತಿವೆ.

| ನಿವೇನದ ಗಾತ್ರ, | ಸಂಖ್ಯೆ |
|---|---|
| 1. 10M X10 M | 1. 1,107 |
| 2. ಅನಿಯತ | 2. 111 |

ಒಟ್ಟು ನಿವೇಶನಗಳು : 1,218

12. ಬಡಾವಣೆ ರೂಪ ರೇಷೆಗೆ ಮತ್ತು ನಕ್ಷೆಗೆ ಅನುಮೋದನೆ ನೀಡುವ ಪ್ರಾಧಿಕಾರವು ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳು ಪ್ರಾಧಿಕೃತ ನಿಯಮಗಳಿಗೆ ಅನುಗುಣವಾಗಿ ಇರುವ ಬಗ್ಗೆ ಮತ್ತು ಭೌತಿಕವಾಗಿ ಬಡಾವಣೆ ರಚನೆಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಗಳಂತೆ ಮಾರಾಟಕ್ಕೆ ನಿವೇಶನಗಳನ್ನು ಸದರಿ ಪ್ರಾಧಿಕಾರವು ಬಿಡುಗಡೆ ಪತ್ರ / ಅನುಮತಿ ಪತ್ರ ನೀಡತಕ್ಕದ್ದು. ಅನುಮತಿ ಪತ್ರವಿಲ್ಲದೆ ನಿವೇಶನ ಪರಭಾರೆ ನಿಷೇಧಿಸಿದೆ.

13. ಭೂ ಪರಿವರ್ತನಾ ಪತ್ರ, ಬಡಾವಣೆ ಅನುಮೋದನೆ ಪತ್ರ, ಅನುಮೋದಿತ ಬಡಾವಣೆ ನಕ್ಷೆ ಹಾಗೂ ಬಡಾವಣೆಯಲ್ಲಿ ಮೂಲಭೂತ ಸೌಕರ್ಯ ಶಾಸನಾತ್ಮಕವಾಗಿ ರಚನೆಯಾದ ಬಗ್ಗೆ ನೀಡಿದ ಪತ್ರಗಳನ್ನು ಹಾಜರುಪಡಿಸಿ ನಿವೇಶನಗಳನ್ನು ನೋಂದಾವಣೆ ಮಾಡಿಸಿಕೊಡತಕ್ಕದ್ದು.

14. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲು ಮಾಡಲಾಗುವುದು.

## ಷೆಡ್ಯೂಲ್ ವಿವರ

**ಐಟಂ ಸಂಖ್ಯೆ : 01** ( ಶ್ರೀ. ರಾಜೀವ್ ರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ, ಬೆಂಗಳೂರು ಇವರ ಬಾಬ್ತು )

ತುಮಕೂರು ಜಿಲ್ಲೆ ಶಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಶೀಬಿ ಅಗ್ರಹಾರ ಗ್ರಾಮದ

ಸ.ನಂ.34/1 ರಲ್ಲಿ 10-09
41/2 ರಲ್ಲಿ 17-24
271 ರಲ್ಲಿ 04.00
272 ರಲ್ಲಿ 04-00
273 ರಲ್ಲಿ 04-00
39-33
ಖರಾಬು 00-07
ಒಟ್ಟು 40-00 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿನ ಚಕ್ಕುಬಂದಿ.

| | | ಸ.ನಂ.34/1 | ಸ.ನಂ.41/2 | ಸ.ನಂ.271 | ಸ.ನಂ.272 | ಸ.ನಂ.273 |
|---|---|---|---|---|---|---|
| ಪೂರ್ವಕ್ಕೆ | .. | ಸ.ನಂ.34/2 | ಸ.ನಂ.32 ಮತ್ತು 35 | ಸ.ನಂ.274 | ಸ.ನಂ.271 | ಸ.ನಂ.272 |
| ಪಶ್ಚಿಮಕ್ಕೆ | .. | ಸ.ನಂ.274 | ಸ.ನಂ.41/1 | ಸ.ನಂ.272 | ಸ.ನಂ.283 | ಸ.ನಂ.36 |
| ಉತ್ತರಕ್ಕೆ | .. | ಸ. ನಂ.35 | ಸ.ನಂ.27 | ಸ.ನಂ.35 | ಸ.ನಂ.35 | ಸ.ನಂ.41ಮತ್ತು 35 |
| ದಕ್ಷಿಣಕ್ಕೆ | .. | ಸರ್ವೆಯಿನಾಂ ಚಿಕ್ಕಶೀಬಿ ಗಡಿ | ಸ.ನಂ.273 | ಶೀಬಿ ಗ್ರಾಮದ ಸ.ನಂ.69 ರ ಜಮೀನು | ಶೀಬಿ ಗ್ರಾಮದ ಸ.ನಂ.69 ರ ಗಡಿ | ಶೀಬಿ ಗ್ರಾಮದ ಸ.ನಂ.69 ರ ಜಮೀನು |

**ಐಟಂ ಸಂಖ್ಯೆ : 02** ( ಶ್ರೀಮತಿ. ವೈ. ಮಂಜುಳಾರೆಡ್ಡಿ ಕೋಂ ರಾಜೀವ್ ರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ, ಬೆಂಗಳೂರು ಇವರ ಬಾಬ್ತು ).

ತುಮಕೂರು ಜಿಲ್ಲೆ ಶಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಶೀಬಿ ಅಗ್ರಹಾರ ಗ್ರಾಮದ

ಸ.ನಂ.34/2 ರಲ್ಲಿ 08-14
ಸ.ನಂ.35 ರಲ್ಲಿ 29-13
ಖರಾಬು 00-03
ಒಟ್ಟು 37-30 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿನ ಚಕ್ಕುಬಂದಿ.

| | | ಸ.ನಂ 34/2 | ಸ.ನಂ.35 |
|---|---|---|---|
| ಪೂರ್ವಕ್ಕೆ | .. | ಸ.ನಂ 33 ರ ಜಮೀನು | ಸ.ನಂ.32 ರ ಜಮೀನು |
| ಪಶ್ಚಿಮಕ್ಕೆ | .. | ಸ.ನಂ.34/1 ರ ಜಮೀನು | ಸ.ನಂ.41 ರ ಜಮೀನು |
| ಉತ್ತರಕ್ಕೆ | .. | ಸ.ನಂ.35 ರ ಜಮೀನು | ಸ.ನಂ.32 ರ ಜಮೀನುಸ |
| ದಕ್ಷಿಣಕ್ಕೆ | .. | ಸರ್ವೇಯಿನಾಂ ಚಿಕ್ಕಶೀಬಿ ಗಡಿ | ಸ.ನಂ.34,271,272,274 ರ ಜಮೀನು |

ಸಹಿ.
ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.

01. ತಹಸೀಲ್ದಾರರು ಶಿರಾ ತಾಲೂಕು ರವರಿಗೆ ಮೂಲ ಕಡತ, ಅನುಮೋದಿತ ನಕ್ಷೆ, ತಾಲೂಕು ಸರ್ವೇಯರ್ ನಕ್ಷೆ ಹಾಗೂ ಚಲನ್‌ದೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂ. ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.

02. ನಗರ ಯೋಜನಾ ನಿರ್ದೇಶಕರು, ಬೆಂಗಳೂರು (ಪ್ರಾಧಿಕಾರ / ನಗರಪಾಲಿಕೆ /ಪುರಸಭೆ/ ನಗರಸಭೆ/ ಗ್ರಾಮಪಂಚಾಯತಿ ಇವರಿಗೆ.

03. ನಗರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರು ಇವರಗೆ.

04. ......................... ಏಕಗವಾಕ್ಷಿ ಸಮಿತಿಯಲ್ಲಿನ ಇಲಾಖೆಗಳ ಸಂಬಂಧಿತ ಅಧಿಕಾರಿಗಳಿಗೆ.

05. ಅರ್ಜಿದಾರರಾದ ಶ್ರೀ. ರಾಜೀವ್ ರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ ಮತ್ತು ಶ್ರೀಮತಿ. ವೈ. ಮಂಜುಳಾ ರೆಡ್ಡಿ ಕೋಂ ರಾಜೀವ್ ರೆಡ್ಡಿ, ಬೆಂಗಳೂರು ರವರಿಗೆ ದೃಢೀಕೃತ ಅಂಚೆ ಮೂಲಕ

06. ಕಾರ್ಯದರ್ಶಿಗಳು, ಗ್ರಾಮ ಪಂಚಾಯ್ತಿ, ಶೀಬಿ ಅಗ್ರಹಾರ, ಶಿರಾ ತಾಲೂಕು ರವರಿಗೆ ಮಾಹಿತಿಗಾಗಿ ರವಾನಿಸಿದೆ.

07. ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳ ಪರವಾಗಿ,
ತುಮಕೂರು ಜಿಲ್ಲೆ.

ಎಚ್ಚ/aln.a4 size MG.